# ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,

## ನವನಗರ, ಹುಬ್ಬಳ್ಳಿ – 580 025

**ದೂರವಾಣಿ ಸಂಖ್ಯೆ : 2224098, 2224195, 2224301, 2222616, 2224274, 2222505.**

**ಕ್ರ.ಸಂ. : ಹುಧಾನಪ್ರಾ : ನಿ. ಹಂ/2012-13/3792** **ದಿ:29/11/2012**

## ನಿವೇಶನಕ್ಕಾಗಿ ಅರ್ಜಿ ಆಹ್ವಾನ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಧಾರವಾಡ ಲಕಮನಹಳ್ಳಿ ಗ್ರಾಮದ ರಿ.ಸ.ನಂ. 15/2/1ಬ ಹಾಗೂ 15/2 ನೇದ್ದರ ಕ್ಷೇತ್ರ 05ಎಕರೆ-03 ಗುಂಟೆ ವಸತಿ ವಿನ್ಯಾಸದಲ್ಲಿ ವರ್ಗೀಕರಣವಾರು ಹಾಗೂ ಅಳತೆವಾರು ನಿವೇಶನಗಳನ್ನು ವಿತರಣೆ ಮಾಡಲು ಪ್ರಾಧಿಕಾರದಲ್ಲಿ ಅರ್ಜಿಯನ್ನು ಕರೆಯಲಾಗಿದೆ. ಹೊಸದಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವವರು ಕಾಲಂ 15 ರಲ್ಲಿ ಕಾಣಿಸಿದ ನೋಂದಣಿ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| ವರ್ಗೀಕರಣವಾರ ಹಂಚಿಕೆಗೆ ಲಭ್ಯವಿದ್ದ ನಿವೇಶನಗಳು | | | | | | | | | | | | ಅರ್ಜಿ ಜೊತೆ ಸಂದಾಯ ಮಾಡುವ ಮುಂಗಡ ಹಣ ಮತ್ತು ನೋಂದಣಿ ಶುಲ್ಕ | | | |
|---|---|---|---|---|---|---|---|---|---|---|---|---|---|---|---|
| ಅ.ನ | ಅಳತೆ ಚ.ಮೀಗಳಲ್ಲಿ | ಎ | ಬಿ | ಸಿ | ಡಿ | ಇ | ಎಫ್ | ಜಿ | ಎಚ್ | ಆಯ್ | ಒಟ್ಟು ನಿವೇಶನಗಳು | ಪ್ರತಿ ನಿವೇಶನಕ್ಕೆ ಅಂದಾಜು ಬೆಲೆ | ಅರ್ಜಿಯ ಜೊತೆ ತುಂಬಬೇಕಾದ ಠೇವಣಿ ಹಣ ಪ್ರತಿಶತ 10% ರಂತೆ | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಂಗವಿಕರು, ಮಾಜಿ ಸೈನಿಕರಿಗೆ ಪ್ರತಿಶತ 3% ರಂತೆ | ನೋಂದಣಿ ಶುಲ್ಕ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | 6x9 | 1 | 2 | 5 | 2 | 2 | 1 | 16 | 1 | 1 | 31 | 2,79,000=00 | 27,900=00 | 8,370=00 | 50=00 |
| | 9x15 | – | 1 | 2 | 1 | 1 | 1 | 8 | 1 | – | 15 | 6,97,500=00 | 69,750=00 | 20,925=00 | 200=00 |
| | ಅನಿಯಮಿತ | – | 1 | 3 | 1 | 1 | 1 | 8 | 1 | – | 16 | – | 30,000=00 | 10,000=00 | 200=00 |

## ಅರ್ಹತೆ ಮತ್ತು ಷರತ್ತುಗಳು :

1. **ಅರ್ಜಿದಾರರು ತಮ್ಮ ಅಥವಾ ತಮ್ಮ ಕುಟುಂಬದ ಹೆಸರಿನಲ್ಲಿ ಮನೆ ಇಲ್ಲವೇ ನಿವೇಶನವನ್ನು ಹೊಂದಿರಬಾರದು.**
2. ಅರ್ಜಿದಾರರು ಕರ್ನಾಟಕದಲ್ಲಿ 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ನಿವಾಸಿಯಾಗಿರಬೇಕು. ಸೈನಿಕರಿಗೆ ಕೇಂದ್ರ ರಾಜ್ಯ ಸರ್ಕಾರಿ ನೌಕರರಿಗೆ ಈ ಕರಾರು ಅನ್ವಯಿಸುವುದಿಲ್ಲ, ಕ್ರೀಡೆ ಹಾಗೂ ಇತರ ಕ್ಷೇತ್ರಗಳಲ್ಲಿ ಹೆಸರಾಂತ ಕಲಾವಿದರಾಗಿದ್ದಲ್ಲಿ ಈ ಕರಾರಿನಲ್ಲಿ ಸಡಿಲಿಕೆ ಉಂಟು.
3. ಒಂದು ವೇಳೆ ನಿವೇಶನ ವಿತರಣೆಯಲ್ಲಿ ಏನಾದರೂ ಅಡಚಣೆ ಬಂದರೆ ಈ ಪ್ರಕಟಣೆಯನ್ನು ರದ್ದುಪಡಿಸಿ ನೋಂದಣಿ ಹಣ ಹೊರತುಪಡಿಸಿ ಠೇವಣಿ ಹಣವನ್ನು ಬಡ್ಡಿ ರಹಿತವಾಗಿ ಪರತ ಮಾಡುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರುತ್ತದೆ.
4. ಪ್ರಾಧಿಕಾರವು ಅರ್ಜಿದಾರರ ಅರ್ಹತೆ ಹಾಗೂ ಅವಶ್ಯತೆ ಆಧಾರದ ಮೇಲೆ ನಿವೇಶನಗಳನ್ನು ಮಂಜೂರು ಮಾಡುವ ಹಕ್ಕು ಹೊಂದಿರುತ್ತದೆ. ನಿವೇಶನ ವಿತರಣೆ ಸಮಯದಲ್ಲಿರುವ ನಿಯಮಗಳಂತೆ ಕ್ರಮ ಜರುಗಿಸಲಾಗುವುದು. ಇದನ್ನು ಸಾರ್ವಜನಿಕರು ಮತ್ತು ಅರ್ಜಿದಾರರು ಪ್ರಶ್ನಿಸುವ ಹಕ್ಕು ಹೊಂದಿರುವುದಿಲ್ಲ.
5. ನಿವೇಶನ ಹಂಚಿಕೆಗಾಗಿ ನಿಯಮಾನುಸಾರ ಅರ್ಜಿದಾರರಿಂದ ಒದಗಿಸಲಾದ ವಿವರಗಳು ಮತ್ತು ದಾಖಲೆಗಳು ಯಾವುದೇ ಸಮಯದಲ್ಲಿ ತಪ್ಪು ಅಥವಾ ಸುಳ್ಳು ಎಂಬುದು ಕಂಡು ಬಂದರೆ ಮುಂಗಡ ಹಣ ಮುಟ್ಟುಗೋಲು ಹಾಕಿಕೊಂಡು ನಿವೇಶನ ಮಂಜೂರಿ ರದ್ದುಪಡಿಸಲಾಗುವುದು.
6. ಈ ಮೊದಲು ನೋಂದಣಿ ಮಾಡಿಕೊಂಡವರು ನೋಂದಣಿ ಚಲನದ ಝರಾಕ್ಸ್ ಪ್ರತಿಯೊಂದಿಗೆ ಹೊಸದಾಗಿ ಅಫಿಡೆವಿಟ್‌ನೊಂದಿಗೆ ಅರ್ಜಿ ಸಲ್ಲಿಸಬಹುದು.
7. 18 ವರ್ಷ ಮೇಲ್ಪಟ್ಟವರು ಮಾತ್ರ ಅರ್ಜಿ ಹಾಕಲು ಅರ್ಹರಾಗಿರುತ್ತಾರೆ. ಇದಕ್ಕೆ ದಾಖಲೆ ನೀಡುವುದರ ಜೊತೆಗೆ ವಾಸಸ್ಥಳದ ದಾಖಲೆ ನೀಡುವುದು.

8. ಈಗ ವಿತರಿಸಲ್ಪಡುವ ನಿವೇಶನದ ಒಟ್ಟು ಮೌಲ್ಯವು ಅಂದಾಜು ರೂಪದಲ್ಲಿದ್ದು ಅದನ್ನು ಯಾವುದೇ ಕಾರಣಗಳಿಂದ ಅನಿವಾರ್ಯವಾಗಿ ಪರಿಷ್ಕರಿಸಬೇಕಾದಲ್ಲಿ ನಿವೇಶನದ ವ್ಯತ್ಯಾಸದ ರಕಂನ್ನು ವಸೂಲ ಮಾಡಲಾಗುವುದೆಂದು ಈ ಮೂಲಕ ಸ್ಪಷ್ಟ ತಿಳುವಳಿಕೆ ನೀಡಲಾಗಿದೆ.
9. ಇತ್ತೀಚಿನ ಭಾವಚಿತ್ರಗಳು (2) ಅರ್ಜಿಯ ಜೊತೆಗೆ ಲಗತ್ತಿಸಬೇಕು.
10. ಅಪೂರ್ಣ ಮಾಹಿತಿಯನ್ನು ನೀಡಲಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11. ನಿಮ್ಮ ಮನೆ ವಿಳಾಸ ಬದಲಾದಲ್ಲಿ ಕೂಡಲೇ ಲಿಖಿತವಾಗಿ ತಿಳಿಸಬೇಕು.
12. ಈ ಹಿಂದೆ ಬೇರೆ ಬೇರೆ ವಿನ್ಯಾಸದಲ್ಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆಯದೇ ಇದ್ದವರು ಪೂರ್ಣ ವಿವರ ಮಾಹಿತಿಯೊಂದಿಗೆ ಈ ನಿವೇಶನಕ್ಕಾಗಿ ನಿಗದಿಪಡಿಸಿದ ಫಾರ್ಮನ್ನು ಪಡೆದು ಅರ್ಜಿ ಮಾಡಿಕೊಳ್ಳಬಹುದು ನಿಯಮಾನುಸಾರ ಅವರ ಅರ್ಜಿ ಪರಿಗಣಿಸಲಾಗುವುದು.
13. ಈಗಾಗಲೇ ಯಾವುದೇ ಪ್ರಾಧಿಕಾರದಿಂದ ನಿವೇಶನ ಪಡೆದು ಅದನ್ನು ಮಾರಾಟ ಮಾಡಿದಲ್ಲಿ ಅಂತವರು ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.
14. 225 ಚದುರ ಮೀಟರಗಿಂತ ಕಡಿಮೆಯಿದ್ದ ಕ್ಷೇತ್ರಕ್ಕೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ನೋಂದಣಿ ಶುಲ್ಕ ರೂ. 50=00 ಸಂದಾಯ ಮಾಡಬಹುದು.

**ಕಾಲಂ 3 ರಿಂದ 11 ರವರೆಗಿನ ಪ್ರವರ್ಗಗಳು.**

15. ಎ) ಇತರೆ ಹಿಂದುಳಿದ ವರ್ಗಗಳು (ಬಿ) ಅನುಸೂಚಿತ ಬುಡಕಟ್ಟುಗಳು (ಸಿ) ಅನುಸೂಚಿತ ಜಾತಿಗಳು (ಡಿ) ಮಾಜಿ ಸೈನಿಕರು ಮೃತ ಸೈನಿಕರ ಕುಟುಂಬದ ಸದಸ್ಯರು ಮತ್ತು ಕೇಂದ್ರ ಶಸ್ತ್ರ ಪಡೆಯ ಸದಸ್ಯರು. (ಇ) ರಾಜ್ಯ ಸರ್ಕಾರ/ನಿಗಮ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು. ಎಫ್) ಕೇಂದ್ರ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಗಳು/ನಿಗಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು. (ಜಿ) ಸಾರ್ವಜನಿಕರು (ಎಚ್) ಕಲೆ, ವಿಜ್ಞಾನ, ಕ್ರೀಡೆ ಅಥವಾ ಇನ್ಯಾವುದೇ ಕ್ಷೇತ್ರಗಳಲ್ಲಿ ಶ್ಲಾಘನೀಯ ಸಾಧನೆಯನ್ನು ಸಾಧಿಸಿರುವ ವ್ಯಕ್ತಿಗಳು (ಐ) ಅಂಗವಿಕಲರು.
16. ಪ್ರತಿಯೊಬ್ಬರು ಅರ್ಜಿ ಸಲ್ಲಿಸುವಾಗ ಅರ್ಜಿಯ ಜೊತೆ ಈ ಮೇಲ್ಕಂಡ ಶರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಅಫಿಡವೀಟ್ ಸಲ್ಲಿಸುವುದು ಕಡ್ಡಾಯ.
17. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ ನವನಗರ ಹುಬ್ಬಳ್ಳಿಯಲ್ಲಿ ನಿವೇಶನ ಅರ್ಜಿಗಾಗಿ ರೂ. 100.00 ಹಾಗು ನೋಂದಣಿ ಅರ್ಜಿಗಾಗಿ ರೂ. 50.00 ಸಂದಾಯ ಮಾಡಿ **ದಿನಾಂಕ:30-11-2012 ರಿಂದ 10-12-2012** ರವರೆಗೆ ಪಡೆದುಕೊಳ್ಳಬಹುದು, ಅರ್ಜಿಯನ್ನು ಭರ್ತಿ ಮಾಡಿ ಎಲ್ಲಾ ದಾಖಲೆಗಳೊಂದಿಗೆ ನೋಂದಣಿ ಹಾಗೂ ಮುಂಗಡ ಹಣ ಶುಲ್ಕದೊಂದಿಗೆ **ದಿನಾಂಕ : 11-12-2012 ರಿಂದ 20-12-2012 ರವರೆಗೆ ಮಧ್ಯಾಹ್ನ 2:30** ಗಂಟೆಯೊಳಗೆ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

    ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಆದೇಶದನ್ವಯ ಶರತ್ತುಗಳು ಬದಲಾವಣೆಗೆ ಒಳಪಟ್ಟಿರುತ್ತವೆ.

18. ಹೆಚ್ಚಿನ ಮಾಹಿತಿಗಾಗಿ www.hduda.org ಸಂಪರ್ಕಿಸಬಹುದಾಗಿದೆ.

**ಆಯುಕ್ತರು,**
**ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,**
**ಹುಬ್ಬಳ್ಳಿ.**

**ಶ್ರೀ. ಲಿಂಗರಾಜಪಾಟೀಲ**
**ಅಧ್ಯಕ್ಷರು,**
**ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,**
**ಹುಬ್ಬಳ್ಳಿ.**

## – :ನಾಗರಿಕರಲ್ಲಿ ವಿನಂತಿ :–

**ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ನಿವೇಶನಗಳನ್ನು ಖರೀದಿಸುವ ಮುಂಚೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿಶ್ವಾಸರ್ಹತೆ ಬಗ್ಗೆ ಮಾಹಿತಿ ಪಡೆಯಿರಿ ಅನಧೀಕೃತ ಬಡಾವಣೆಗಳ ಬಗ್ಗೆ ಎಚ್ಚರವಾಗಿರಿ.**